ಆಫೀಸ್ ಅಂತ ಬರೆದಿತ್ತು. ಬೆಲ್ ಒತ್ತಿದಳು. ರಂಗರಾವು ಸ್ವತಃ ಬಾಗಿಲು ತೆರೆದು 'ಹಾಂ ಹಾಂ... ಸುರಭಿ, ಇವತ್ತು ಅಪಾಯಿಂಟ್ಮೆಂಟಿತ್ತು' ಅಂತ ನೆನಪು ಮಾಡಿಕೊಂಡು ಒಳಗೆ ಕರೆದರು. 'ಇಬ್ಬರು ಬಂದಿದ್ರು, ಈಗಷ್ಟೇ ಹೋದರು' ಅನ್ನುತ್ತ ಮತ್ತೊಂದು ಬಾಗಿಲು ತೆರೆದು, ಅದರೊಳಗಿನ ಇನ್ನೊಂದು ಹಾಲಿಗೆ ಕರೆದೊಯ್ದರು. ದೊಡ್ಡ ದೊಡ್ಡ ಕ್ಯಾಮರಾಗಳು, ಕಂಪ್ಯೂಟರು ಪರದೆ, ಏನೋ ಉಪಕರಣಗಳು, ಡ್ರೆಸಿಂಗ್ ರೂಮು ಎಲ್ಲಾ ಇದ್ದ ಸುಸಜ್ಜಿತ ಆಫೀಸು. ಸೋಫಾಸೆಟ್ ಟೀಪಾಯಿಗಳ ಮೇಲೆ ಏನೇನೋ ಪೋಸ್ಟರುಗಳು. 'ಏನು ತಗೋತೀರ... ಕಾಫಿ, ಟೀ? ಕಾನ್ಸಂಟ್ರೇಷನ್ ಹಾಳಾಗತ್ತೆ ಅಂತ ಅಸಿಸ್ಟೆಂಟುಗಳನ್ನ ಹೊರಗೆ ಕಳಿಸಿರ್ತೀನಿ. ಪ್ರೊಡಕ್ಷನ್ ಮೇನೇಜರು ಇಲ್ಲೇ ಹೋಗಿದಾರೆ, ಸಂಕೋಚ ಮಾಡಕೋಬೇಡಿ' ಸ್ವತಃ ಥರ್ಮಾಸಿಂದ ಕಾಫಿ ಬಗ್ಗಿಸಿಕೊಟ್ಟರು. 'ಬೇಕಿದ್ರೆ ಫ್ರೆಶ್ಶಾಗಿಬನ್ನಿ. ಎಲ್ಲಾ ವ್ಯವಸ್ಥೆಯಿದೆ' ಅಂತ ಒಂದು ರೂಮಿನತ್ತ ಬೆರಳುಮಾಡಿದರು. ಫ್ರೆಶ್ಆಗಿ ಕೂದಲಿಗೆ, ಮುಖಕ್ಕೆ ಲಘುವಾಗಿ ಟಚಪ್ ಕೊಟ್ಟಕೊಂಡು ಬಂದವಳಿಗೆ ಎರಡು ಪೋಸ್ಟರು ತೋರಿಸಿದರು. 'ನಾಲ್ಕು ಸಿನಿಮಾ ಕೈಯಲ್ಲಿದೆ, ಸದ್ಯಕ್ಕೆ ಎರಡು ಮುಗಿಸಿಕೊಡಬೇಕು. 'ಅವಳುಂಟು ನಾನುಂಟು' ಮತ್ತೆ 'ಥೂ ನಿನ್ನ!' ಎರಡೂ ಬಿಗ್ ಬಜೆಟ್ಟಿನವು. ಇಷ್ಟು ದಿನಕ್ಕೆ ಸೂಟಾಗಬಹುದು ಅನಿಸೋ ಮೂರುಜನ ಸಿಕ್ಕಿದೀರ. ಆದರೆ, ಕ್ಯಾಮರಾಕ್ಕೆ ಸರಿಹೊಂದಬೇಕು. ನನ್ನ ನಿಮ್ಮ ಅದೃಷ್ಟ' ಅಂತ ನಕ್ಕು, 'ಎಲ್ಲಿ... ಆ ಜಾಗದಲ್ಲಿ ನಿಲ್ಲಿ ಪ್ಲೀಸ್' ಅಂದರು. ಸುರಭಿ ಎದ್ದು ಅವರು ತೋರಿಸಿದ ಮ್ಯಾಟ್ ಮೇಲೆ ನಿಂತಳು. ಎದುರು ನಿಂತು ಅವಳನ್ನು ಪಾದದಿಂದ ಹಣೆಯವರೆಗೆ ಕಣ್ಣಲ್ಲಿ ಪರೀಕ್ಷಿಸಿ ನಂತರ ನಡೆಯಲು ಹೇಳಿದರು. ತಾನು ಎದುರಿನ ದೊಡ್ಡಸ್ಕ್ರೀನಿನಲ್ಲಿ ಮೂಡುವುದನ್ನು ನೋಡಿದಳು. 'ಗುಡ್, ಸೀರೆ ಉಟ್ಟುಬನ್ನಿ' ಅಂದರು. ಮೊಣಕಾಲು, ಹೊಟ್ಟೆ, ಎದೆ, ಕುತ್ತಿಗೆಯನ್ನು ನಿರೀಕ್ಷಿಸಿ, ಸೀರೆ ಸ್ವಲ್ಪ ಕೆಳಗಿರಲಿ ಅನ್ನುತ್ತ ಹೊಕ್ಕಳಿಂದ ನಾಲ್ಕಿಂಚು ಕೆಳಗಿಳಿಸಿ, ಸೆರಗನ್ನು ಒಂದು ಸ್ತನ ಅನಾವೃತವಾಗುವಂತೆ ಇರಿಸಲು ಹೇಳಿ, ನಡೆಯಲು ಹಚ್ಚಿದರು. ಸಹಜಸುಂದರ ಮೈಕಟ್ಟಿನ ಸುರಭಿಯ ನಿತಂಬ ಪ್ರಯತ್ನಪಡದೇ ಲಾಸ್ಯವಾಡುತ್ತಿತ್ತು. ಕಾಲು ಕೊಂಕಿಸಿ, ಒಂದುಕೈ ಮೇಲೆತ್ತಿ, ಸೆರಗುಬೀಳಿಸಿ ಹಾಸಿಗೆ ಸರಿಪಡಿಸುವ ಭಂಗಿಗಳಾದ ಮೇಲೆ ಸಲ್ವಾರ್ ಕಮೀಜಿಗೆ ಬದಲಿಸಿ ಆಮೇಲೆ ಟೀಶರ್ಟು, ಜೀನ್ಸಿನಲ್ಲಿ ವಿವಿಧ ಭಂಗಿಗಳಾಗುವಾಗ ಎರಡು ತಾಸಾಯಿತು. ಸುಸ್ತಾದರೂ ಉತ್ಸಾಹದಲ್ಲಿದ್ದಳು. 'ಇಲ್ಲಿಯವರೆಗೆ ನನಗೇನೋ ಓಕೆ. ತೊಂಬತ್ತೊಂಬತ್ತು ಪರ್ಸೆಂಟ್ ನೀವು ಆಯ್ಕೆಯಾಗತೀರ. ನಾಳೆ ಒಂದು ಚಿಕ್ಕಟೆಸ್ಟಿದೆ, ಇದೇ ಹೊತ್ತಿಗೆ ಬಂದ್ಬಿಡಿ. ಅಗ್ರಿಮೆಂಟೆಲ್ಲ ನಾಳೆ, ಪ್ರೊಡಕ್ಷನ್ ಮೇನೇಜರ್ ಇರ್ತಾರೆ, ನೋಡುವ. ಈಗ ಇಷ್ಟು ಅಡ್ವಾನ್ಸಿಟ್ಟುಕೊಳ್ಳಿ' ಅಂತ ಹತ್ತುಸಾವಿರ ಎದುರಿಟ್ಟು ಒಂದುಕಡೆ ಸಹಿ ಹಾಕಿಸಿಕೊಂಡರು. ಅವಳ ಮನಸ್ಸು ಗರಿಗೆದರಿ ಹಾರಾಡತೊಡಗಿತು. ಅಡ್ವಾನ್ಸು ಅಂದರೆ ಆಯ್ಕೆಯಾದಂತೆಯೆ. ನಡುಗುವ ಕೈಯಿಂದ ನೋಟಿನ ಕಟ್ಟನ್ನೆತ್ತಿಕೊಂಡು 'ಥ್ಯಾಂಕ್ಸ್' ಅಂದಳು.

ಮರುದಿನ ಒಳಬಂದು ಫ್ರೆಶ್ ಆದನಂತರ ಪೋಸ್ಟರನ್ನು ಎದುರಿಟ್ಟು, 'ನೋಡಿ ಈ 'ಅವಳುಂಟು ನಾನುಂಟು' ಚಿತ್ರದಲ್ಲಿ ಜಾಟ್ ಹುಡುಗಿ ದಕ್ಷಿಣಕ್ಕೆ ಬರೋ ಕತೆಯಿದೆ. ಆ ಎತ್ತರ, ಮೈಕಟ್ಟು ನಿಮಗೆ ಹೊಂದುತ್ತೆ. ಅದಕ್ಕೇ ನಿಮ್ಮನ್ನಾರಿಸಿದ್ದು. ಈ ಪೋಸ್ಟರಿನಲ್ಲಿ ರೇಖಾಚಿತ್ರವಿದೆಯಲ್ಲ ಅಲ್ಲಿ ನಿಮ್ಮ ನಿಜ ಚಿತ್ರ ತುಂಬಿಸ್ಬೇಕು ಅಷ್ಟೇ! ಈಗ ಕೊನೇ ಒಂದೆರಡು ಟೆಸ್ಟುಗಳು. ನೀವು ಸ್ವಿಮ್ಮಿಂಗ್ ಡ್ರೆಸ್ಸಿನಲ್ಲಿ ಬರಬೇಕು. ಅಂದ್ರೆ ನಿಮ್ಮ ಒಳಉಡಪಿನಲ್ಲಿ ಬನ್ನಿ, ಈಗ ಸಾಕು.' ಕಣ್ಣರಳಿಸಿದಳು. 'ನೀವು ನಾಯಕಿಪಾತ್ರದೋರು, ಎಲ್ಲಾ ಉಡುಪುಗಳಿರುತ್ತವೆ. ಸಿನಿಮಾ ನೋಡಿಲ್ಲದೋರ? ವೈಜಯಂತಿಮಾಲಾರ ಸಂಗಂ, ಶರ್ಮಿಳಾರ ಇವನಿಂಗ್ ಇನ್ ಪ್ಯಾರೀಸ್ ನೋಡಿಲ್ವ? ಈಗಿನ ಯಾವ ಸಿನಿಮಾದಲ್ಲಿಲ್ಲ?' ಛೇಡಿಸಿದಂತಾಯಿತು. 'ತೇಜಾಬ್'ನಲ್ಲಿ